(ಶ್ರೀ ಕೊಂಡಜ್ಜಿ ಬಸಪ್ಪ)

ಹೋಗಿದ್ದಾರೆ ಆದ್ದರಿಂದ ಅಕೌಂಟ್ಸ್ ಟ್ರೇಸ್ ಮಾಡುವುದಕ್ಕೆ ಕಷ್ಟವಾಗಿದೆ. ಆ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಅಲ್ಲಿಯ ಪೈಸಿಡೆಂಟರು ಯಾರಿದ್ದಾರೆ ಅವರಿಗೆ ನೋಟೀಸ್ ಕೊಟ್ಟಿದೆ. ಮತ್ತು ಇನ್ನುಳಿದ ಎರಡು ಸೊಸೈಟಿಗಳ ಬಗ್ಗೆ ಶೀಘ್ರವಾಗಿ ಕ್ರಮತೆಗೆದುಕೊಳ್ಳಬೇಕೆಂದು ಕೋ-ಆಪರೇಟೀವ್ ಎಕ್ಸ್‌ಟೆಷನ್ ಆಫೀಸರಿಗೆ ತಿಳಿವಳಿಕೆ ಕೊಟ್ಟಿದೆ. ಎಷ್ಟು ಹಣ ದುರುಪಯೋಗವಾಗಿದೆ ಎನ್ನುವಕ್ಕೆ ಅಂಕಿಅಂಶ ಇಲ್ಲ.

ಶ್ರೀ ಅನ್ನದಾನಯ್ಯ.—ಈ ಸೊಸೈಟಿಗಳ ಡೀಫಂಕ್ಟ್ ಆಗಿ ಎಷ್ಟು ದಿವಸ ಆಯಿತು ? ಸೊಸೈಟಿ ಸೆಕ್ರೆಟರಿಯವರಿಂದ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಆಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ಮೂರು ಸೊಸೈಟಿಗಳ ವಿಚಾರ ಹೇಳಿದೆ, ಬಾಕಿ ಸೊಸೈಟಿಗಳ ವಿಷಯದಲ್ಲಿ ಲಿಕ್ವಿಡೇಟರ್ಸ್ ಹೋಗಿ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುತ್ತಾ ಇದ್ದಾರೆ.

ಶ್ರೀ ಜಿ. ಟಿ. ರಂಗಪ್ಪ.—ಮೂರು ಸೊಸೈಟಿಗಳ ಕೆಲಸ ಮಾಡುತ್ತಾ ಇವೆ ಎಂದು ಹೇಳಿದ್ದೀರಿ. ಇವಕ್ಕೆ ಲಿಕ್ವಿಡೇಟರ್ಸ್‌ನ್ನು ನೇಮಕ ಮಾಡಿದ್ದು ಯಾವಾಗ ?

ಶ್ರೀ ಕೊಂಡಜ್ಜಿ ಬಸಪ್ಪ.—ಎಲ್ಲಕ್ಕೂ ಒಂದೇಸಾರಿ ಮಾಡಿದರು ಆದರೆ ಈ ಮೂರು ಸೊಸೈಟಿಗಳ ಕಾರ್ಯದರ್ಶಿಯವರು ಅಕೌಂಟ್ಸ್, ರೆಕಾರ್ಡ್ ಕೊಡದೆ ಇದ್ದುದರಿಂದ They are not working actually. But technically they are supposed to be working until records and accounts are handed over to the liquidator. ಆದ್ದರಿಂದ ಅವೂ ಕೂಡ ಸ್ವಾಭಾವಿಕವಾಗಿ ಕೆಲಸ ಮಾಡುತ್ತಿವೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಂಟು ಸೊಸೈಟಿಗಳ ಪೈಕಿ ಮೂರು ಸೊಸೈಟಿಗಳು ಕೆಲಸ ಮಾಡುತ್ತಾ ಇವೆ ಎಂದು ಹೇಳಿದರಿ. ಈ ಮೂರು ಸೊಸೈಟಿಗಳ ಪೈಕಿ ಒಂದು ಉಣ್ಣಿ ಸೊಸೈಟಿಯಲ್ಲಿ 30 ಸಾವಿರ ರೂಪಾಯಿ ಡಿಫಾಲ್ಕೇಷನ್ ಆಗಿದೆ ಆದರ ಸೆಕ್ರೆಟರಿ ಇನ್ನೂ ಚಾರ್ಜ್ ಕೊಟ್ಟಿಲ್ಲ ಅಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದರಲ್ಲಿ ಉಣ್ಣಿ ಸೊಸೈಟಿ ಯಾವುದು ಇಲ್ಲ ಎಂದು ಕಾಣುತ್ತದೆ.

Allotment of Overseas Wheat to the State.

*Q—204. Sri SIDDIAH KASHIMATH (Sirhatti).—

Will the Government be pleased to state :—

(*a*) the quota of Overseas Wheat allotted to the State from Avad Godowns ;

(*b*) whether the entire quantity has been lifted by the State ?

A.—Sri M. V. KRISHNAPPA (Minister for Revenue).—

(*a*) 20,000 tonnes.

(*b*) Yes.

ಶ್ರೀ ಸಿದ್ದಯ್ಯ ಕಾಶೀಮಠ್.—ಗೋಧಿಯನ್ನು ತರಲು ಮದರಾಸಿಗೆ ಹೋಗಿದ್ದ ರಾರಿಗಳಲ್ಲ ಕೆಲವರು ದಾರಿಯಲ್ಲೇ ಗೋಧಿಯನ್ನು ಮಾರಿಕೊಂಡು ಖಾಲಿ ರಾರಿಗಳನ್ನು ನಗರಕ್ಕೆ ತಂದರು ಎಂಬ ದೂರು ಸರ್ಕಾರಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆಯೇ ಉತ್ತರ ಹೇಳಿದ್ದೇನೆ. ಆ ರೀತಿ ಏನೂ ದೂರು ಬಂದಿಲ್ಲ. ಅವಡಿಯಲ್ಲಿನ ಕೇಂದ್ರದ ಅಧಿಕಾರಿಗಳು ಗೋಧಿಯನ್ನು ಸರಿಯಾಗಿ ಹಂಚಲಿಲ್ಲ ಆ ಬಗ್ಗೆ ನಾವು ದೂರು ಮಾಡಿದೆವು, ಆ ಅಧಿಕಾರಿಗಳು ನಮ್ಮ ಮೇಲೆ ದೂರು ಮಾಡಿದರು. ಈ ರೀತಿ ಜಗಳ ನಡೆಯುತೊಡಗಿ ಗೋಧಿ ಬರುವುದು ತಡವಾಯಿತು.

ಶ್ರೀ ಸಿದ್ದಯ್ಯ ಕಾಶೀಮಠ್.—ಕೇಂದ್ರ ಸರ್ಕಾರದವರು 20 ಸಾವಿರ ಟನ್ ಗೋಧಿ ಕೊಡ ಮಾಡಿದರಲ್ಲಾ ಅದರಲ್ಲಿ ಎಷ್ಟು ಟನ್ ಗೋಧಿ ತರಲಾಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಮದರಾಸಿಗೆ ಹತ್ತಿರದಲ್ಲಿರುವ ಮೈಸೂರಿನ ಜಿಲ್ಲೆಗಳಿಗೆಲ್ಲಾ ಅವಡಿಯಿಂದ ಗೋಧಿ ಅರಾಟ್ ಮಾಡಿದೆ. ಡೆಪ್ಯೂಟಿ ಕಮಿಷನರು ಅರಾಟ್ ಮಾಡಿದರು. ವಿವರ ಗಳನ್ನು ಬೇಕಾದರೆ ಹೇಳುತ್ತೇನೆ. ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್‌ಗೆ 1,600 ಟನ್, ಕೋಲಾರಕ್ಕೆ 1,300 ಟನ್, ತುಮಕೂರಿಗೆ 1,000 ಟನ್, ಚಿತ್ರದುರ್ಗಕ್ಕೆ 1,800 ಟನ್ ಬಂದಿದೆ.

ಶ್ರೀ ಕೆ. ಎಸ್. ನಾರಾಯಣ ರಾವ್.—ಅವಡಿಯಿಂದ ಗೋಧಿ ತರುವ ಸಂದರ್ಭದಲ್ಲಿ ಬೆಂಗಳೂರಿನ ಕೋ-ಆಪರೇಟೀವ್ ಸೊಸೈಟಿಗಳವರು ನಮಗೆ ಗೋಧಿ ಸಿಕ್ಕುತ್ತಾ ಇಲ್ಲ, ಲಾರಿಗಳು ಖಾಲಿ ವಾಪಸು ಬರುತ್ತಾ ಇವೆ ಎಂದು ಹೇಳಿ ತರಾವು ಮಾಡಿ ಕಳುಹಿಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ಅದು ನಿಜ. ಅವಡಿಯಲ್ಲಿ ಇದ್ದುದು ಕೇಂದ್ರ ಸರ್ಕಾರದ ಗೋಡೌನ್. ಅದು ಖಾಲಿ ಆದಾಗ ಖಾಲಿ ಆಯಿತು ಎಂದರೆ ದೇಶಕ್ಕೆ ತೊಂದರೆಯಾಗುತ್ತದೆ ಎಂದು ಮೈಸೂರು ಕೋಟಾ ಮುಗಿಯಿತು. ಎಂದು ಬೋರ್ಡ್ ಹಾಕುತ್ತಾ ಇದ್ದರು. ಆದ್ದರಿಂದ ಕೆಲವು ಲಾರಿಗಳವರು ಖಾಲಿ ಬರಬೇಕಾಯಿತು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಗೋಧಿ ಸಂಗ್ರಹ ಇದೆಯೇ ಎಂಬುದನ್ನು ತಿಳಿದುಕೊಂಡು ಹೋಗಬಾರದೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿಗೆ ಹೋಗುವಷ್ಟರಲ್ಲೇ ಸಂಗ್ರಹ ಮುಗಿಯುತ್ತಾ ಇತ್ತು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಫೋನ್ ಮಾಡಿ ವಿಷಯ ತಿಳಿದುಕೊಳ್ಳಬಹುದಾಗಿತ್ತು.

ಶ್ರೀ ಎಸ್. ಶಿವಪ್ಪ.—ಅವಡಿ ಗೊಡೌನ್‌ನಿಂದ ತರಿಸಿಕೊಳ್ಳತಕ್ಕ ಕಾಲದಲ್ಲಿ ಅದು ಲಾರಿಗಳಲ್ಲಿ ಅಥವಾ ರೈಲ್ವೆನಲ್ಲಿ ಬರುವಾಗ ಇಂತಹ ಲಾರಿ ಅಥವಾ ರೈಲಿನಲ್ಲಿ ಇಷ್ಟು ಕೋಟಾ ಬರುತ್ತದೆ ಎಂದು ಪ್ರೆಯರ್ ಇಂಟಿಮೇಷನ್ ಕೊಡತಕ್ಕ ವ್ಯವಸ್ಥೆ ಇಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ಸಂದರ್ಭಗಳಲ್ಲಿ ಇಲ್ಲಿಂದ ಲಾರಿಗಳು ಅಲ್ಲಿಗೆ ಹೋಗುವುದೇ ಇಲ್ಲ, ಬೆಂಗಳೂರು—ಮದರಾಸಿನ ಮಧ್ಯೆ ನೂರಾರು ಲಾರಿಗಳನ್ನು ಖಾಸಗಿಯವರು ಓಡಿಸುತ್ತಾರೆ. ಕೋಟಾ ಯಾರಿಗೆ ಅರಾಟ್ ಆಗುತ್ತದೆ ಅವರು ಅಲ್ಲೇ ಇದ್ದು ಅಲ್ಲಿನ ಲಾರಿಗಳನ್ನೇ ಎಂಗೇಜ್ ಮಾಡಿ ತರುತ್ತಾ ಇದ್ದರು. ಅದು ಬಂದ ತಕ್ಷಣ ಯಾವ ತಾಲ್ಲೂಕಿಗೆ ಎಷ್ಟು ಕೋಟಾ ಬರುತ್ತದೆ ಅದನ್ನು ಅಮರ್ತ್ಯಾರರು ಡಿಸ್ಟ್ರಿಬ್ಯೂಟ್ ಮಾಡುತ್ತಾರೆಯೇ ವಿನಾ ಹೋರ್ ಸೇಲರ್ಸ್ ಎಲ್ಲವನ್ನೂ ಹಂಚುವುದಕ್ಕೆ ಆಗುವುದಿಲ್ಲ.

Sri C. S. HULKOTI.—Has it come to the notice of the Government that the quota allotted to the district of Dharwar was not supplied fully to the taluks in the District of Dharwar ?

ಶ್ರೀ ಎಂ. ವಿ. ಕೃಷ್ಣಪ್ಪ.—ಧಾರವಾಡ ಡಿಸ್ಟ್ರಿಕ್ಟ್‌ಗೂ ಮದರಾಸಿಗೂ ಬಹಳ ದೂರವಾಗಿರುವು ದರಿಂದ ಹೆಚ್ಚು ಭಾಗವನ್ನು ಮದರಾಸಿಗೆ ಹತ್ತಿರ ಇರತಕ್ಕ ಜಿಲ್ಲೆಗಳಿಗೇ ಅರಾಟ್ ಮಾಡುತ್ತಾ ಇದ್ದೆವು. ಧಾರವಾಡಕ್ಕೆ 668 ಟನ್ ಅಲ್ಲಿಂದ ಎಂದರೆ ಅವಡಿಯಿಂದ ಬಂದಿದೆ.

ಶ್ರೀ ಕೆ. ಎಚ್. ರಂಗನಾಥ್.—20 ಸಾವಿರ ಟನ್‌ಗಳಲ್ಲಿ ಎಷ್ಟು ಭಾಗ ಹೋರ್ ಸೇಲರ್ಸ್‌ಗೆ ಕೊಡರಾಗಿದೆ ? ಅದರಲ್ಲಿ ಬೆಂಗಳೂರಿನವರು ಎಷ್ಟು ಜನ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರ ನನ್ನಲ್ಲಿ ಇಲ್ಲ.

ಶ್ರೀ ಬಿ. ಚನ್ನಬೈರೇ ಗೌಡ.—ಅವಡಿಯಿಂದ ನಮ್ಮ ದೇಶಕ್ಕೆ ಅರಾಟ್ ಆದ ಗೋಧಿ ಎಷ್ಟು ? ಅವುಗಳನ್ನು ತರುವುದಕ್ಕೆ ಎಷ್ಟು ಲಾರಿಗಳು ಹೋಗಿದ್ದವು ಆ ಲಾರಿ ಬಾಡಿಗೆ ವಗೈರೆ ಖರ್ಚನ್ನು ಯಾರು ವಹಿಸಿಕೊಂಡರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೇಂದ್ರ ಸರ್ಕಾರದವರು ನಮಗೆ ಅವಡಿಯಿಂದ 10 ಸಾವಿರ ಟನ್ ಅರಾಟ್ ಮಾಡುತ್ತಾರೆ ಎಂದರೆ ಅದನ್ನು ರೈಲ್‌ನಲ್ಲಿ ಕಳುಹಿಸುತ್ತಾರೆ. ಅದನ್ನು ನಾವು ಸ್ವಾಭ್ಯಂಡಿಂಗ್ ಆರ್ಡರ್ಸ್ ಪ್ರಕಾರ ತೆಗೆದುಕೊಳ್ಳುತ್ತೇವೆ. ತಿಂಗಳು ತಿಂಗಳು ರೀ ಅರಾಟ್ ಮಾಡುವುದಿಲ್ಲ. ಜುಲೈ, ಆಗಸ್ಟ್ ಸೆಪ್ಟಂಬರ್ ಈ ಮೂರು ತಿಂಗಳಿನಲ್ಲಿ 10ಸಾವಿರಟನ್ ಸಾಕಾಗಲಿಲ್ಲ ಇನ್ನೂ ಹೆಚ್ಚಿಗೆ ಬೇಕಾಗಿತ್ತು. ರೈಲ್ವೆ ಮೂಲಕ ತೆಗೆದುಕೊಂಡು ಹೋಗುವುದಕ್ಕೆ ಕಷ್ಟವಾಗಿತ್ತು.

(ಶ್ರೀ ಎಂ. ವಿ. ಕೃಷ್ಣಪ್ಪ)

ಆಗ ಮೂರು ನಾಲ್ಕು ತಿಂಗಳು ಆಹಾರ ಧಾನ್ಯದ ಅಭಾವ ಇದ್ದುದರಿಂದ ರಸ್ತೆಯ ಮೂಲಕ ತೆಗೆದುಕೊಂಡು ಹೋಗಲು ಕಂಡೀಷನ್ ಹಾಕಿ ಗೋಧಿಯನ್ನು ಕೊಟ್ಟರು. ನಾವು ಜಿಲ್ಲಾಧಿಕಾರಿಗಳಿಗೆ ತಿಳಿಸಿದೆವು. ನೂರಕ್ಕೆ 99 ಜನ ಯಾರೂ ಮದ್ರಾಸಿಗೆ ಲಾರಿಯನ್ನು ತೆಗೆದುಕೊಂಡು ಹೋಗುವುದಿಲ್ಲ. ಅಲ್ಲಿ ಲಾರಿ ಕಂಪನಿಗಳಿವೆ. ಗೋಧಿಯನ್ನು ಕೊಡುವುದಾದರೆ, ಅಲ್ಲಿಯ ಲಾರಿ ಕಂಪೆನಿಗಳಲ್ಲಿ ವಿಚಾರಿಸಿ ಪದಾರ್ಥಗಳನ್ನು ತೆಗೆದುಕೊಂಡು ಬರುತ್ತಾರೆ. ಇಲ್ಲಿಂದ ಲಾರಿ ತೆಗೆದುಕೊಂಡು ಹೋಗಿ ಖಾಲಿ ಲಾರಿಗಳನ್ನು ವಾಪಸು ತೆಗೆದುಕೊಂಡು ಬಂದರು ಎನ್ನುವುದು ತುದ್ದ ಸುಳ್ಳು. ಯಾರೂ ಆ ರೀತಿ ಮಾಡುವುದಿಲ್ಲ.

9-30 A.M.

ಶ್ರೀ ಎ. ಜೆ. ದೊಡ್ಡಮೇಟಿ,—ಧಾರವಾಡ ಜಿಲ್ಲೆಗೆ ಅವಡಿಯಿಂದ 660 ಟನ್ ಮಾತ್ರ ಬಂದಿದೆ ಉಳಿದದ್ದು ಬೆಂಗಳೂರಿನಿಂದ ಕೊಡಲಾಯಿತು ಎಂದು ಹೇಳಿದಿರಿ. ಅವಡಿಯೊಳಗೆ ಏನು ತುರ್ತು ಪರಿಸ್ಥಿತಿ ಇತ್ತೋ ಅದೇ ರೀತಿ ಬೆಂಗಳೂರಿನಲ್ಲಿಯೂ ಇತ್ತು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿನಲ್ಲಿರುವುದೂ ಕೇಂದ್ರ ಸರ್ಕಾರದ ಗೋಡೌನ್. ನಾವು ಗೋಡೌನ್ ಬೆಂಗಳೂರಿನಲ್ಲಿ ಇಟ್ಟಿಲ್ಲ. ಇಲ್ಲಿಯೂ ಕೂಡ ನೂರಾರು ಲಾರಿಗಳು ಬಂದು ನಿಲ್ಲುತ್ತಿದ್ದುವು. ಇಲ್ಲಿರುವ ತೂಕ ಮಾಡುವ ಯಂತ್ರದ ಶಕ್ತಿ ಒಂದು ದಿನಕ್ಕೆ 70—80 ಲಾರಿಗಳಿಗೆ ಲೋಡ್ ಮಾಡಬಹುದು. ಆಗ ಒಂದು ದಿನಕ್ಕೆ 300—400 ಲಾರಿಗಳು ಬರುತ್ತಿದ್ದುವು. ಸೆಂಟ್ರಲ್ ಗೋಡೌನ್ ಕೆಪಾಸಿಟಿ ಕಡಮೆ ಇರುವುದರಿಂದ ಒಂದೊಂದು ಬಾರಿ ಐದಾರು ದಿನ ಕಾಯಬೇಕಾಗಿ ಬಂದ ನಿದರ್ಶನಗಳಿವೆ. ನಮ್ಮ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಕೇಂದ್ರಕ್ಕೆ ಪ್ರತಿಭಟನೆಯನ್ನು ಸೂಚಿಸಿದರು. ಅದರ ಮೇಲೆ ಇಷ್ಟು ರಾದ್ಧಾಂತವೆಲ್ಲ ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಹಾರದ ವಿಷಯದಲ್ಲಿ ಚರ್ಚೆ ಮಾಡುತ್ತ ಇರುವಾಗ ಅಪ್ಪಣೆ ಕೊಡಿಸಿದರು. ಜಾಲಾರಪೇಟೆಯ ಸ್ಟೇಷನ್ ಮಾಸ್ಟರು ಮದ್ರಾಸ್ ಸರ್ಕಾರದ ಮಾತಿನ ಮೇರೆ ಮೈಸೂರಿಗೆ ಬರಬೇಕಾಗಿದ್ದ ಗೋಧಿಯನ್ನು ಬೇರೆ ಕಡೆಗೆ ಡೈವರ್ಟ್ ಮಾಡಿದರು ಎಂದು 20 ಸಾವಿರ ಟನ್ ಧಾನ್ಯವನ್ನು ಜಾಲಾರಪೇಟೆಯಲ್ಲಿ ಸ್ಟೇಷನ್ ಮಾಸ್ಟರು ಬೇರೆ ಕಡೆಗೆ ಡೈವರ್ಟ್ ಮಾಡಿದರೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವಡಿಯಿಂದ ಬಂದ ಸಾಮಾನು ಯಾವ ರೈಲಿನಲ್ಲಿಯೂ ಬರಲಿಲ್ಲ. ಲಾರಿಯಲ್ಲಿ ಬಂದುದರಿಂದ ರೈಲ್ವೆ ಸ್ಟೇಶನ್ ಮಾಸ್ಟರ್ ಅಧಿಕಾರ ಇದರ ಮೇಲೆ ಏನೂ ಇಲ್ಲ ಎಂದು ನಾನು ಹೇಳಿದ್ದು. ಜಾಲಾರ್‌ಪೇಟೆ ಒಂದು ಬಾಟಲ್ ನೆಕ್. ಅಲ್ಲಿ 300—400 ವ್ಯಾಗನ್‌ಗಳು ನಿಲ್ಲುತ್ತವೆ. ಆಗ ಕೆಲವು ವಾಗನ್‌ಗಳು ಅಲ್ಲಿ ನಿಂತಿದ್ದು ಆಹಾರದ ತೊಂದರೆ ಇದ್ದುದರಿಂದ. ನಾನು ಅಲ್ಲಿಗೆ ಹೋಗಿ ಅಲ್ಲಿಂದ ವ್ಯಾಗನ್‌ಗಳು ಮುಂದೆ ಬರುವ ಹಾಗೆ ಮಾಡಬೇಕಾಯಿತು ಎಂದು ಹೇಳಿದೆ.

ಶ್ರೀ ಎಸ್. ಶಿವಪ್ಪ.—ಮದ್ರಾಸಿನಲ್ಲಿರತಕ್ಕ ರೀಜನಲ್ ಫುಡ್ ಗೋಡೌನ್ ಅಧಿಕಾರಿಗಳು ಮೈಸೂರು ಸರ್ಕಾರದಿಂದ ಹೋದಂಥ ಕೆಲವು ಡೀಲರುಗಳ ಬಗ್ಗೆ ಅವರು ಬೋಗಸ್ ಡೀಲರುಗಳಿರಬಹುದು ಎನ್ನುವ ಶಂಕೆಯಿಂದ ವಾಪಸು ಕಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದರಲ್ಲಿ ಸತ್ಯಾಂಶ ವಿಲ್ಲ. ನಮ್ಮ ಮುಖ್ಯ ಮಂತ್ರಿಯವರು ಮದ್ರಾಸ್ ರಿಜನಲ್ ಡೈರೆಕ್ಟರ ಮೇಲೆ ದೂರು ಕೊಟ್ಟರು. ಬೆಂಗಳೂರು ಮತ್ತು ಮದ್ರಾಸು ಡಿಪೋಗಳಲ್ಲಿ ನಮ್ಮ ಲಾರಿಗಳನ್ನು 8—10 ದಿನ ಕಾಯಿಸುತ್ತಾರೆ ಎಂದು ಮೇಲಿಂದ ಮೇಲೆ ಬರೆದರು. ಅದರ ಮೇಲೆ ಈ ಕಥೆ ಎಲ್ಲ ಪುರುವಾಯಿತು.

ಶ್ರೀ ಕೆ. ಎಚ್. ರಂಗನಾಥ್.—20,000 ಟನ್‌ಗಳಲ್ಲಿ ಕೃಷ್ಣ ಫ್ಲೋರ್ ಮಿಲ್‌ಗೆ ಎಷ್ಟು ಅಲಾಟ್ ಆಗಿದೆ ಮತ್ತು ಅದರ ಪೈಕಿ ಎಷ್ಟು ಆದರಲ್ಲಿ ತಂದಿದ್ದಾರೆ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದರ ವಿವರಗಳು ನನ್ನಲಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಕೇಂದ್ರ ಸರ್ಕಾರದ ಗೋಡೌನ್‌ಗಳಿಂದ ಹಂಚಲು ತೊಂದರೆ ಯಾಗುತ್ತಿರುವುದರಿಂದ ಈಗಲಾದರೂ ಕೂಡ ರಾಜ್ಯ ಸರ್ಕಾರದವರು ಆ ಗೋಡೌನ್‌ಗಳನ್ನು ವಶಪಡಿಸಿಕೊಂಡು ಮುಂದೆ ಕೋಟಾ ನಲೀನಾಗಿ ಹಂಚುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ನಾವು ದಾಸ್ತಾನಿಟ್ಟುಕೊಂಡಿದ್ದೇವೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಆಹಾರ ಧಾನ್ಯಗಳನ್ನು ಸರ್ಕಾರ ನೇರವಾಗಿ ಜಿಲ್ಲಾ ಮುಖ್ಯ ಸ್ಥಳಗಳಿಗೆ ರೈಲಿನಲ್ಲಿ ರವಾನಿಸುವುದಕ್ಕೆ ಏನು ತೊಂದರೆ ? ಲಾರಿಗಳಲ್ಲಿ ತರುವುದರಿಂದ ಅನೇಕ ಸೊಸೈಟಿಗಳಿಗೆ ನಷ್ಟವಾಗುತ್ತಿದೆ ಮತ್ತು ಬ್ಲಾಕ್ ಮಾರ್ಕೆಟ್ ಆಗುವುದಕ್ಕೂ ಅವಕಾಶವಾಗಿದೆ ಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೈಲಿನಲ್ಲಿ ಕಳಿಸಬೇಕಾದರೆ ವ್ಯಾಗನ್‌ಗಳು ಸಿಕ್ಕುವುದಿಲ್ಲ. ಮೂರು ನಾಲ್ಕು ತಿಂಗಳು ರಸ್ತೆಯ ಮುಖಾಂತರವೇ ಧಾನ್ಯ ಹೋಗಬೇಕಾಗುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಾನ್ಯ ಮಂತ್ರಿಗಳು ಇಷ್ಟೊಂದು ಹೇಳಿದರೂ ಕೂಡ ಅವಡಿಯಿಂದ ಗೋಧಿ ರವಾನೆಯಾದ ವಿಷಯದಲ್ಲಿ ಜನರ ಮನಸ್ಸಿನಲ್ಲಿರುವ ಅನುಮಾನ ಹಾಗೆಯೇ ಇದೆ. ಈ ವಿಷಯದಲ್ಲಿ ನಭೆಯಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾರೆಯೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜನಗಳು ಎಂದರೆ ಮಾನ್ಯ ಸದಸ್ಯರು. ಈ ವಿಚಾರವಾಗಿ ನಾಲ್ಕೈದು ಸಲ ಹೇಳಿದ್ದೇನೆ. ನಾವು ಸಹ ಜನಗಳ ಪ್ರತಿನಿಧಿಗಳು ಎನ್ನುವುದನ್ನು ಮರೆಯಬಾರದು.

ಶ್ರೀ ಎಸ್. ಶಿವಪ್ಪ.—ಆಹಾರದ ವಿಷಯದಲ್ಲಿ ಸತ್ಯಾಂಶವಾದ ಒಂದು ಹೇಳಿಕೆಯನ್ನು ಕೊಡುವುದರ ಮೂಲಕ ನಮ್ಮನ್ನೂ ನಂಬಿಕೆಗೆ ತೆಗೆದುಕೊಳ್ಳತಕ್ಕ ಕಾರ್ಯವನ್ನು ಅವರು ಮಾಡುತ್ತಾರೆಯೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಬಗ್ಗೆ ಈಗಾಗಲೇ ಅನೇಕ ಸಲ ಹೇಳಿರುವುದರಿಂದ ಅದು ಅನಾವಶ್ಯಕವೆಂದು ಭಾವಿಸುತ್ತೇನೆ, ಸ್ವಾಮಿ ?

Mr. SPEAKER.—Question hour is over.

QUESTIONS FOR ANSWERS ON THE DAY

(but not taken up).

Supply of water to Handrangi Village

* *Q.*—511. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether estimates have been prepared to supply water to Handrangi Village in Arkalgud Taluk under National Rural Water Supply Scheme ;

(*b*) if so, whether the scheme has been sanctioned ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) Yes.

(*b*) Not yet.

MEMBERS' REPRESENTATIONS.

Mr. SPEAKER.—Next item on the agenda is, presentation Report.

ಶ್ರೀ ಬಿ. ವೈರಪ್ಪಾಜಿ (ತುರುವೇಕೆರೆ).—ಸ್ವಾಮೀ, ತುರುವೇಕೆರೆಯಿಂದ ಒಂದು ಜೆಲಗ್ರಾಂ ಬಂದಿದೆ.....